ಕಥೆ

# ಪ್ರಾಪರ್ಟಿ ಆಕಾಶ ಮಲ್ಲಿಗೆ



ಅಗ್ರಹಾರ ಕೃಷ್ಣಮೂರ್ತಿ

ಕಲೆ: ವಿಶ್ವನಾಥ್ ಎ.ಎಸ್.

1

ಸುಮಾರು ಒಂದೆರಡು ವರ್ಷಗಳಿಂದಲೂ ಮುಕುಂದ ತನ್ನ ಅಪ್ಪ, ಅಮ್ಮನ ಬಳಿ ಎಲ್ಲಾದರೂ ಒಂದು ಪ್ರಾಪರ್ಟಿ ತಗೋಬೇಕು, ಇಲ್ಲಾ ಒಳ್ಳೆಕಡೆ ಇನ್ವೆಸ್ಟ್ ಮಾಡಬೇಕು, ಇಲ್ಲಾಂದ್ರೆ ತುಂಬಾ ಜೋಪಾನವಾಗಿ ಉಳಿಸಿರೋ ದುಡ್ಡು ಅದಕ್ಕೆ ಇದಕ್ಕೆ ಅಂತ ಖರ್ಚಾಗಿಬಿಡುತ್ತೆ, ಈಗ ಯಾವ ಬ್ಯಾಂಕಲ್ಲಿಟ್ಟರೂ ಒಳ್ಳೆ ಬಡ್ಡೀನೆ ಬರಲ್ಲ. ಅಸಲಿಗೆ ಬ್ಯಾಂಕುಗಳನ್ನೇ ಮುಚ್ಚುತ್ತಿದ್ದಾರೆ. ನಮ್ಮ ದುಡ್ಡಿಗೆ ಯಾವ ಗ್ಯಾರಂಟಿನೂ ಇಲ್ಲದಂಗಾಗಿದೆ ಮುಂತಾದ ಮಾತುಗಳನ್ನ ಆಗಾಗ್ಗೆ ಆಡುತ್ತಲೇ ಇದ್ದರೂ ಅವರಿಬ್ಬರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಮಗ ಮನೇಲಿಲ್ಲದ ವೇಳೆಯಲ್ಲಿ ಅವನಿಗಿಷ್ಟವಿದ್ದ ರೀತೀಲಿ ಮಾಡಲಿ, ನಾವು ತಲೆ ಹಾಕೋದು ಬೇಡ ಎಂದು ಮಾತಾಡಿಕೊಳ್ಳುತ್ತಿದ್ದರು. ಯಾವುದೇ ಅಸಮಾಧಾನದಿಂದ ಅಲ್ಲ. ಎಷ್ಟು ಉಳಿಸಿದಾನೆ, ಎಲ್ಲಿ ಇಟ್ಟಿದ್ದಾನೆ ಇತ್ಯಾದಿಗಳ ಬಗ್ಗೆಯೂ ಅವರು ಎಂದೂ ಯೋಚಿಸಿದವರಲ್ಲ. ಹಾಗೆ ನೋಡಿದರೆ ಜಾಣನಾಗಿ ಪ್ರಾಪರ್ಟಿ ಕೊಳ್ಳುವಷ್ಟು ಉಳಿಸಿರುವುದರ ಬಗ್ಗೆ ಅವರಿಬ್ಬರಿಗೆ ಸಂತೋಷ ಮತ್ತು ಹೆಮ್ಮೆಯೂ ಇತ್ತು. ಜತೆಗೆ ಲಗ್ನವಾದ ಮೇಲೆ ಬೇರೆ ಮನೆಗೆ ಹೋಗುವ ಯೋಚನೆಗೀಚನೆ ಮಗನಿಗೆ ಬಂದಿರಬಹುದು ಎಂಬ ಒಂದು ಸಣ್ಣ ಅನುಮಾನ ಅವರಿಬ್ಬರ ತಲೆಯಲ್ಲಿ ಸುಳಿದದ್ದಕ್ಕೆ ಕಾರಣ ಇತ್ತೀಚೆಗೆ ಅವನಿಗೆ ಕನ್ಯೆ ಕೊಡುವ, ಅವನ ಜಾತಕ ಕೇಳುವವರ ಸಂಖ್ಯೆ ಹೆಚ್ಚಾಗುತ್ತಲೇ ಇದ್ದದ್ದು. ಲಗ್ನದ ವಿಷಯ ಎತ್ತಿದರೆ ಅವನು ಏನಾದರೂ ನಗೆಚಾಟಿಕೆ ಮಾಡಿ ತೇಲಿಸಿ ಸುಮ್ಮನಾಗುತ್ತಿದ್ದ. ಅವನಿಗಿನ್ನೂ ಇಪ್ಪತ್ತಾರು ಇಪ್ಪತ್ತೇಳರ ವಯಸ್ಸು. ಅವನೇ ಯಾರನ್ನಾದರೂ ಇಷ್ಟಪಟ್ಟಿರಬಹುದು ಎಂದು ಅವರಿಬ್ಬರು ಯೋಚಿಸುತ್ತಿದ್ದರು.

ಅಪ್ಪಅಮ್ಮನೇ ತೀರ್ಮಾನ ಮಾಡಲಿ ಎಂದು ಮುಕುಂದ ತನ್ನ ಲಗ್ನದ ಕಡೆ ಗ್ಯಾನ ಕೊಟ್ಟವನಲ್ಲ. ಎಲೆಕ್ಟ್ರಾನಿಕ್ಸ್ ಎಂಜಿನಿಯರಾಗಿ ಚೆನ್ನಾಗಿ ದುಡಿಯುತ್ತಿದ್ದ ಮಗನಿಂದ ಎಂದೂ ಒಂದು ಬಿಡಿಗಾಸನ್ನೂ ಕೇಳಿದವರಲ್ಲ. ಬ್ಯಾಂಕ್ ನೌಕರಿಯಿಂದ ನಿವೃತ್ತರಾಗಿದ್ದ ದಂಪತಿಗಳಿಬ್ಬರಿಗೂ ಸಾಕಷ್ಟು ಪೆನ್ಷನ್ ಬರುತ್ತಿತ್ತು. ತಮ್ಮತಮ್ಮ ಬ್ಯಾಂಕ್‌ಗಳ ಮೂಲಕ ಮನೆ ಸಾಲ ಪಡೆದು ತುಂಬಾ ಮುತುವರ್ಜಿ ವಹಿಸಿ ಬ್ಯಾಂಕ್ ಕಾಲನಿಯಲ್ಲೇ ಸುಂದರವಾದ ಮನೆ ಕಟ್ಟಿಸಿದ್ದರು. ನಿವೃತ್ತರಾಗುವುದರೊಳಗೆ ಎಲ್ಲ ಸಾಲವು ತೀರಿತ್ತು. ಒಬ್ಬನೇ ಮಗ, ಮದುವೆಯ ನಂತರವೂ ಜೊತೆಯಲ್ಲೇ ಇರಬಹುದಾದಷ್ಟು ವಿಶಾಲವಾದ ಮತ್ತು ಪ್ರೈವೆಸಿ ಬೇಕಾಗುತ್ತೆ ಎಂಬ ದೃಷ್ಟಿಯಿಂದ ಆರ್ಕಿಟೆಕ್ಟ್ ಜೊತೆ ಎಲ್ಲ ಆಯಾಮಗಳಲ್ಲಿ ಚರ್ಚಿಸಿ ಕಟ್ಟಿಸಿದ್ದರು. ಮನೆ ಖರ್ಚುವೆಚ್ಚ, ಕಾಲಕಾಲಕ್ಕೆ ಪೇಂಟಿಂಗ್, ವಾರಕ್ಕೊಮ್ಮೆ ಬರುವ ಮಾಲಿಗೆ, ಮನೆಗೆಲಸದ ಸಹಾಯಕಿಗೆ